ಗೌರಿಬಿದನೂರು ತಾಲ್ಲೂಕಿನಲ್ಲಿ ಒಟ್ಟು 09 ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘಗಳು ಅನರ್ಹ ಸಹಕಾರ ಸಂಘಗಳಾಗಿದ್ದು, ಈ 09 ಸಹಕಾರ ಸಂಘಗಳ ಪೈಕಿ ಒಂದು ಸಹಕಾರ ಸಂಘವನ್ನು (ಅಲಕಾಪುರ ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘ) ಸಮಾಪನೆಗೊಳಿಸದೆ ಉಳಿಸಿಕೊಂಡು ಮರುಜೀವ ನೀಡಲಾಗಿರುತ್ತದೆ. ಉಳಿದ 08 ಅನರ್ಹ ಸಹಕಾರ ಸಂಘಗಳ ಪೈಕಿ (1) ಚೋಳಶೆಟ್ಟಿಹಳ್ಳಿ, (2) ಜೀಲಾಕುಂಟೆ ಮತ್ತು (3) ಹಳೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘಗಳನ್ನು ತಹಲ್‌ವರೆವಿಗೂ ಸಮಾಲೋಚನೆಗೊಳಿಸಲಾಗಿದೆ.

ಚಿಕ್ಕಕುರುಗೋಡು ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘ ನಿ., ಈ ಸಂಘದ ವಿಶೇಷ ಆಡಿಟ್‌ಗೆ ಈ ಹಿಂದೆ ಬಾಕಿ ಇದ್ದುದರಿಂದ ಪ್ರೊಫೆಸರ್ ಎ. ವೈದ್ಯನಾಥನ್ ಪ್ಯಾಕೇಜಿನಡಿ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ. ಪ್ರಸ್ತುತ ವಿಶೇಷ ಆಡಿಟ್ ಬಾಕಿಯಿರುತ್ತದೆ.

(ಆ) ಚಿಕ್ಕಬಳ್ಳಾಪುರ ಜಿಲ್ಲೆಯು ಹೊಸದಾಗಿ ರಚನೆಯಾಗಿದ್ದು ಕೋಲಾರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ವಿಭಜಿಸಿ ಚಿಕ್ಕಬಳ್ಳಾಪುರ ಜಿಲ್ಲಾ ಇನ್ನೋಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ನಬಾರ್ಡ್, ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳನ್ವಯ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕಾಗಿದ್ದು ಹಾಲಿ ಇರುವ ಬ್ಯಾಂಕು ಆರ್ಥಿಕವಾಗಿ ಸದೃಢವಾಗಿಲ್ಲದ ಕಾರಣ ಹೊಸ ಬ್ಯಾಂಕನ್ನು ಸ್ಥಾಪಿಸಲು ಅವಕಾಶವಿರುವುದಿಲ್ಲ.

ಔಷಧಿಗಳ ಕೊರತೆ

299 (726) **ಶ್ರೀ ಶಿವಶಂಕರ ರೆಡ್ಡಿ ಎನ್.ಎಚ್. (ಗೌರಿಬಿದನೂರು)**:–ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರತಿ ತಾಲ್ಲೂಕಿನಲ್ಲಿ ಎಲ್ಲಾ ಪಶುವೈದ್ಯಕೀಯ ಆಸ್ಪತ್ರೆಗಳಿಗೆ ಈಗ ಸರ್ಕಾರ ಒದಗಿಸುತ್ತಿರುವ ಔಷಧಿಗಳು ಕೇವಲ ಮೂರು ತಿಂಗಳಿಗೆ ಮಾತ್ರ ಲಭ್ಯವಿದ್ದು, ಉಳಿದ ತಿಂಗಳುಗಳಲ್ಲಿ ವೈದ್ಯರು ಚೀಟಿ ಬರೆದುಕೊಟ್ಟು ಖಾಸಗಿಯಾಗಿ ಖರೀದಿಸುವ ಹೊಣೆ ಮತ್ತು ಅನಿವಾರ್ಯ ಪರಿಸ್ಥಿತಿ ರೈತರಿಗೆ ಬಂದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

(ಇ) ಆಯವ್ಯಯದಲ್ಲಿ ಅನುದಾನವನ್ನು ಹೆಚ್ಚಿಸಿ ಪೂರ್ಣ ವರ್ಷದಲ್ಲಿ ಔಷಧಿ ಸಿಗುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ರೇವೂ ನಾಯಕ ಬೆಳಮಗಿ (ಮಾನ್ಯ ಪಶುಸಂಗೋಪನಾ ಸಚಿವರು):–

(ಅ) ಇಲಾಖೆಗೆ ರಾಜ್ಯ ವಲಯದಡಿ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮದಡಿಯಲ್ಲಿ ಸುಮಾರು ರೂ. 12.00 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದ್ದು, ಇದಕ್ಕನುಗುಣವಾಗಿ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಂದ ಅವಶ್ಯಕ ಔಷಧಿಗಳ ಬೇಡಿಕೆಯನ್ನು ಪಡೆದು, ದರಗುತ್ತಿಗೆ ಹೊಂದಿರುವ ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡಲಾಗುತ್ತಿದೆ. ಔಷಧಿಗಳ ಕೊರತೆಯು ಬಗ್ಗೆ ವರದಿಯಾಗಿರುವುದಿಲ್ಲ.

(ಆ) ಅನ್ವಯಿಸುವುದಿಲ್ಲ

(ಇ) ಅನ್ವಯಿಸುವುದಿಲ್ಲ

ಅಂಬಾದೇವಿ ದೇವಸ್ಥಾನದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ

256 (554) **ಶ್ರೀ ನಾಡಗೌಡ ವೆಂಕಟರಾವ್:–** ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಮತ್ತು ಜಲಸಾರಿಗೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಿಂಧನೂರು ತಾಲ್ಲೂಕಿನಲ್ಲಿ ಶ್ರೀ ಅಂಬಾದೇವಿ ದೇವಸ್ಥಾನವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ದೇವಸ್ಥಾನದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಸರ್ಕಾರ ಈ ದೇವಾಲಯದ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳುವುದೇ;

(ಈ) ಹಾಗಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು ಹಾಗೂ ಇದರ ಅಭಿವೃದ್ಧಿಗಾಗಿ ಯಾವಾಗ ಮತ್ತು ಎಷ್ಟು ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಲಾಗುವುದು (ಮಾಹಿತಿ ನೀಡುವುದು)?

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು):–

(ಅ) ಹೌದು